ಮಕ್ಕಳದಿನ ವಿಶೇಷ



ಆಟದಲ್ಲಿ ತೊಡಗುತ್ತಾಳೆ. ಆಡಿಬಂದ ಕಂದನ ಕಾಳಜಿಯಿಂದ ಶುಭ್ರಗೊಳಿಸುತ್ತಾಳೆ.

'ಆಡಿ ಬಾ ನನ ಕಂದ ಅಂಗಾಲ ತೊಳೆದೇನ / ತೆಂಗಿನ ಕಾಯಿ ತಿಳಿನೀರ ತಕ್ಕೊಂಡು / ಬಂಗಾರದ ಮೊರೆ ತೊಳೆದೇನ' ಎನ್ನುತ್ತಾಳೆ ಜಾನಪದ ತಾಯಿ. ಎಲ್ಲ ಅವ್ವಂದಿರೂ ಅಷ್ಟೇ – ಮಾತೃತ್ವದ ಮಾಂತ್ರಿಕತೆಯಲ್ಲಿ ಅವರ ಕೈಯಲ್ಲಿನ ನೀರು ಎಳನೀರೇ ಆಗಿಬಿಡುತ್ತದೆ; ಅಮೃತಸಿಂಚನದ ರೂಪದಲ್ಲಿ ಮಕ್ಕಳನ್ನು ಪೊರೆಯುತ್ತದೆ.

ಅಮ್ಮನ ಪಾಲಿಗೆ ಮಗುವಿಗೆ ಸ್ನಾನ ಮಾಡಿಸುವುದೊಂದು ಬಹುಕಾಳಜಿಯ ಸನ್ನಿವೇಶ. ಆ ಸಂದರ್ಭ ಮಗು–ತಾಯಿಯ ಆಪ್ತಕ್ಷಣಗಳೂ ಹೌದು. ನೀರು ಕಂಡರೆ ದೊಡ್ಡವರೂ ಮಕ್ಕಳಾಗುವಾಗ, ಇನ್ನು ಮಗುವಿನ ಆಟಕ್ಕೆ ಅಂಕೆಯುಂಟೇ? ಅದು ಅಮ್ಮನ ಅಂಕೆ ಮೀರಿ ನೀರಿನಲ್ಲಿ ಆಡತೊಡಗುತ್ತದೆ. ಮಗುವಿನ ಆಟವನ್ನು ಸುಖಿಸುತ್ತಲೇ, ಆ ಆಟ ಕಂದಮ್ಮನ ಪಾಲಿಗೆ ತೊಂದರೆಯಾಗದಂತೆ ತಾಯಿ ಕಣ್ಣು–ಕರುಳು ಕಾಯುತ್ತದೆ.

ನೆತ್ತಿಗೆ ಹಚ್ಚಿದ ಎಣ್ಣೆಯ ಪಸೆ ನೀರಲ್ಲಿ ನೀರಾಗಿ ಹೋಗಬೇಕು. ಮೈಗೆ ಅಂಟಿಕೊಂಡ ಮಣ್ಣು ಮಣ್ಣುಸೇರಬೇಕು. ಮಜ್ಜನ ಮುಗಿಯುವ ವೇಳೆಗೆ ಮಗುವಿನ ಮೈಮನಸುಗಳೆಲ್ಲ ದಣಿವಿನ ಭಾರ ಕಳೆದುಕೊಂಡು ಹೂವಾಗಬೇಕು; ಆಗಲೇ ಅಮ್ಮನ ಮನಸ್ಸಿಗೆ ಸಮಾಧಾನ.

ಈ ಟಿಪ್ಪಣಿಯೊಂದಿಗಿನ ಛಾಯಾಚಿತ್ರಗಳನ್ನು ಗಮನಿಸಿ. ಅಮ್ಮ ಮಗುವನ್ನು ಮೀಯಿಸುತ್ತಿದ್ದಾಳೆ. ಆ ಸಂಭ್ರಮವನ್ನು ಮತ್ತೊಂದು ಮಗು ಎದುರಿಗೆ ಕೂತು ನೋಡುತ್ತಿದೆ. ಮತ್ತೂ ಸೂಕ್ಷ್ಮವಾಗಿ ನೋಡಿ: ನೀರೆರೆಯುತ್ತಿರುವ ಅಮ್ಮ ಕೂಡ ಒಂದು ಮಗುವಿನಂತೆಯೇ ಕಾಣಿಸುತ್ತಿದ್ದಾಳೆ. ಮೂವರು ಮಕ್ಕಳ ಈ ಚಿತ್ರ ಅಬೋಧ ಆನಂದದರ್ಶನದ ಕಲಾಕೃತಿಯಂತೆ ಕಾಣಿಸುತ್ತದೆ. ನೀರುತುಂಬಿದ ಪ್ಲಾಸ್ಟಿಕ್ ದಬರಿಗೆಯಲ್ಲಿ ಕೂತು ಆಡುತ್ತಿರುವ ಮಗು, ತುಂತುರನ್ನು ದಿಟ್ಟಿಸುತ್ತ ಕಣ್ಣರಳಿಸಿರುವ ಕಂದಮ್ಮ, ದೊಡ್ಡ ಎಲೆಯನ್ನು ಛತ್ರಿಯಂತೆ ಹಿಡಿದಿರುವ ಚಿನ್ನಾರಿ – ಎಲ್ಲವೂ ಪ್ರಕೃತಿಯ ಚೆಲುವಿನ ಜೊತೆಗೆ ಮಕ್ಕಳ ಮುಗ್ಧಲೋಕ ತಳುಕು ಹಾಕಿಕೊಂಡಿರುವುದನ್ನು ಸೂಚಿಸುವಂತಿವೆ. ಬದುಕಿನ ಜೀವಂತಿಕೆಯನ್ನೂ ಹೆಚ್ಚಿಸುವುದೇ ಇಂಥ ಹೃದಯಂಗಮ ಬಿಂಬಗಳಲ್ಲವೇ?

ಈ ಚಿತ್ರಗಳನ್ನು ನೋಡುತ್ತಾ – ನಾವೂ ಮಿಂದಂತೆ, ಅಮ್ಮ ಮೀಯಿಸಿದಂತೆ, ಮಳೆಮಾಯಿ ತೋಯಿಸಿದಂತೆ, ಹೀಗೆ ಎಷ್ಟೊಂದು ಆರ್ದ್ರ ಭಾವಗಳು ಎದೆದುಂಬುತ್ತವೆ. ■